ಆಳ, ವಿಸ್ತಾರದಿಂದ ಕೂಡಿದೆ. ಹೊಸ ದೃಷ್ಟಾಂತಗಳಿರುವ 'ಬತ್ತೀಸ ಪುತ್ತಳಿ ಕಥೆ', ಕವಿ ಕುವೆಂಪು ಮನೆಯಲ್ಲಿದ್ದ ಅಜ್ಞಾತ ಕವಿಯ ಹಸ್ತಪ್ರತಿ 'ಸಹ್ಯಾದ್ರಿ ಖಂಡ', ಸೂಳೆಕೆರೆಯ ದೃಷ್ಟಾಂತವನ್ನೊಳಗೊಂಡ 'ಸಿದ್ಧಲಿಂಗಕಾವ್ಯ', ಸಾಂಗತ್ಯದಲ್ಲಿರುವ 'ಬಸವ ಮಹತ್ವದ ಸಾಂಗತ್ಯ', 'ಮಹಾಕೂಟ ಮಹಾತ್ಮೆ', 'ಭುಜಬಲಿ ಚರಿತೆ' ಮುಂತಾದ ಮುಖ್ಯ ಕೃತಿಗಳನ್ನು ಪ್ರಕಟಿಸಿದ್ದಾರೆ. ವಚನ ಸಂಪುಟಗಳು, ಜಾನಪದ ವಿಶ್ವಕೋಶದ ಮಂಡಲಿ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆಯ ಸಂಪಾದಕ ಮಂಡಲಿಯಲ್ಲಿದ್ದ ಅವರು ಅಲ್ಲಿ ಮಾಡಿರುವ ಕೆಲಸಗಳು ಮಹತ್ವದ್ದಾಗಿವೆ. 2016ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಗದಗಿನಲ್ಲಿ ಏರ್ಪಡಿಸಿದ್ದ 13ನೇ ಹಸ್ತಪ್ರತಿ ಸಮ್ಮೇಳನದ ಸರ್ವಾಧ್ಯಕ್ಷತೆ ಭಾನುಮತಿಯವರದಾಗಿತ್ತು.

ನಿವೃತ್ತಿಯ ಬಳಿಕವೂ ಗ್ರಂಥಸಂಪಾದನೆಯಲ್ಲಿ ಭಾನುಮತಿಯವರು ಕ್ರಿಯಾಶೀಲರಾಗಿ ತೊಡಗಿಕೊಂಡಿದ್ದಾರೆ. ಮೈಸೂರಿನ ಕುವೆಂಪು ನಗರದಲ್ಲಿರುವ ಅವರ ಮನೆಯಲ್ಲಿ ನಡೆದ ಸಂದರ್ಶನದಲ್ಲಿ ತಮ್ಮ ಕೆಲಸಗಳ ಕುರಿತು ಸಂಕೋಚದಿಂದಲೇ ಮಾತನಾಡಿದರು. ಅವರೊಂದಿನ ಮಾತು–ಕತೆ ಇಲ್ಲಿದೆ.

- **ಮಹಿಳೆಯರಿಗೆ ಅಪರೂಪವೆನ್ನಿಸುವ ಗ್ರಂಥ ಸಂಪಾದನೆಯಲ್ಲಿ 39 ವರ್ಷಗಳ ಕಾಲ ನಿರಂತರ ತೊಡಗಿಸಿಕೊಂಡು, ಪ್ರಾಚೀನ ಗ್ರಂಥಗಳನ್ನು ಸ್ವತಂತ್ರವಾಗಿ ಸಂಪಾದಿಸಿ ಪ್ರಕಟಿಸಿ, ಹನ್ನೆರಡಕ್ಕೂ ಹೆಚ್ಚು ಗ್ರಂಥಗಳ ಸಂಪಾದನೆಯಲ್ಲಿ ಸಹಯೋಗ ನೀಡಿ ಕನ್ನಡವಾಙ್ಮಯದಲ್ಲಿ ನಿಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ್ದೀರಿ. ಗ್ರಂಥ ಸಂಪಾದನೆ ಎಂದರೆ ಏನು? ಮಹಿಳೆಯರು ಯಾಕೆ ಈ ಕ್ಷೇತ್ರದತ್ತ ಆಕರ್ಷಿತರಾಗಿಲ್ಲ ಮತ್ತು ಅದರಲ್ಲಿ ವಿಸ್ತೃತವಾಗಿ ತೊಡಗಿಕೊಂಡಿಲ್ಲ? ಅದು ಸಾಧ್ಯವಾಗಿರುವ ನಿಮ್ಮ ಅನುಭವದ ಹಿನ್ನೆಲೆಯಲ್ಲಿ ವಿವರಿಸಿ.**

ಗ್ರಂಥ ಸಂಪಾದನೆಯೆಂದರೆ ಒಂದು ಕೃತಿಯ ಬೇರೆ ಬೇರೆ ಹಸ್ತಪ್ರತಿಗಳನ್ನಾಧರಿಸಿ ಕವಿಪಠ್ಯವನ್ನು ಕಟ್ಟಿಕೊಡುವ ಕಾರ್ಯವಾಗಿದೆ. ಅದರ ಜೊತೆಗೆ ಅಧ್ಯಯನ, ಪರ್ಯಾಯ ಅಧ್ಯಯನ, ಸಂಶೋಧನೆಗಳು, ಶಾಸ್ತ್ರಜ್ಞಾನಗಳು ತಳುಕು ಹಾಕ್ಕೊಂಡಿರುತ್ತವೆ. ಗ್ರಂಥಸಂಪಾದನೆ ನಮ್ಮನ್ನು ನಿರಂತರ ವಿದ್ಯಾರ್ಥಿಯಾಗಿರಿಸುತ್ತದೆ. ಯಾವುದಾದರೂ ಹಸ್ತಪ್ರತಿ ಓದಿ ಅದನ್ನು ಬರೆದುಬಿಡಬಹುದೆನ್ನುವಷ್ಟು ಸುಲಭವಲ್ಲ. ಆ ಕೃತಿ ಅಪ್ರಕಟಿತವೇ ಆಗಿದ್ದರೂ ಬೇರೆ ಕಾವ್ಯಗಳಲ್ಲಿ ಆ ಕುರಿತು ಮಾಹಿತಿ ಇದೆಯೆ, ಅಲ್ಲಿ ಬಂದಿರುವುದು ಇಲ್ಲಿ ಪುನರುಕ್ತಿ ಆಗಿದೆಯೆ, ಇದರ ಪಾಠಾಂತರಗಳೇನು, ಅದು ಯಾವ ಛಂದಸ್ಸಿನಲ್ಲಿದೆ, ಕವಿ ಯಾರು ಅನ್ನುವ ವಿಷಯಗಳನ್ನು ಗ್ರಂಥ ಸಂಪಾದಕರು ಗಮನಿಸಬೇಕು. ತುಂಬಾ ಅಪರೂಪದ ಹಸ್ತಪ್ರತಿಗಳನ್ನು ಓದುವಾಗ ಅನೇಕ ಸವಾಲುಗಳಿರುತ್ತವೆ. ತಾಳೆಗರಿಗಳಲ್ಲಿ ಅದೆಷ್ಟೊ ಭಾಗ ಲುಪ್ತವಾಗಿರುತ್ತದೆ. ಓದಲಾಗದಂತೆ ಕ್ಲಿಷ್ಟವಾಗಿ ಮೋಡಿ ಅಕ್ಷರಗಳಲ್ಲಿ ಬರೆದಿರುತ್ತಾರೆ. ಪ್ರಜ್ಞಾಪೂರ್ವಕವಾಗಿ ಬೇರೆಯವರು ತಮ್ಮನ್ನು ಸುಲಭವಾಗಿ ನಕಲು ಮಾಡಬಾರದೆಂದು ಹಾಗೆ ಬರೆದಿರುತ್ತಾರೆ. ಹಸ್ತಪ್ರತಿಗಳು ಜೀರ್ಣವಾಗಿರುತ್ತವೆ. ಕೆಲವೊಮ್ಮೆ ಭೂತಗನ್ನಡಿಯನ್ನಿಟ್ಟುಕೊಂಡು ಅದನ್ನು ಓದಿ ಗ್ರಹಿಸಿ, ಪ್ರತ್ಯಂತರಗಳಿದ್ದರೆ ಪರಿಶೀಲಿಸಿ ಬರೆಯಬೇಕಾಗಿರುತ್ತದೆ. ಯಾವುದು ಪ್ರಕ್ಷಿಪ್ತ ಅನ್ನಿಸುತ್ತದೊ ಅದನ್ನು ಕೈಬಿಡಬೇಕಾಗುತ್ತದೆ. ಅದನ್ನೆಲ್ಲ ಎದುರಿಸಿ ಬರೆದು ಪ್ರಕಟಿಸಿದ ಮೇಲೂ ಹಣ, ಕೀರ್ತಿ ಲಭಿಸುವುದಿಲ್ಲ. ಹಾಗೆಂದು ಯಶಸ್ಸಿಲ್ಲ ಅನ್ನಲಾರೆ. ಈ ಕೃತಿಗಳು ಸಂಶೋಧನ ವಿದ್ಯಾರ್ಥಿಗಳು, ಬೋಧಕರು, ಸಂಶೋಧಕರಿಗೆ ಆಕರವಾಗುತ್ತವೆ. ಜನಸಾಮಾನ್ಯರು ಇದರಲ್ಲಿ ಆಸಕ್ತಿ ತೋರುವುದು ಕಡಿಮೆ. ಅದರಲ್ಲೂ ಮಹಿಳೆಯರು ಕೌಟುಂಬಿಕ ಜವಾಬ್ದಾರಿಗಳ ಜೊತೆ ಇದನ್ನು ನಿಭಾಯಿಸುವುದು ಸವಾಲಿನ ಕೆಲಸ.